


ಅತಿಥಿಯಾಗುವುದು ಹೇಗೆಂದು ಯೋಚಿಸತೊಡಗಿದ. ಅವನಿಗೆ ಒಂದರ ಹಿಂದೆ ಒಂದರಂತೆ ಹಲವಾರು ದಾರಿಗಳು ಗೋಚರಿಸತೊಡಗಿದವು. ಒಂದು ದೊಡ್ಡ ಹೋಟೆಲಿಗೆ ಹೋಗಿ ಹೊಟ್ಟೆ ತುಂಬಾ ತಿಂದು ಬಿಲ್ಲು ಕೊಡುವಾಗ ದುಡ್ಡಿಲ್ಲ ಎಂದು ಕೈ ಎತ್ತುವುದು ಅವನಿಗೆ ಸಮಂಜಸವಾದ ಉಪಾಯವಾಗಿ ಕಂಡಿತು. ಅವರು ಅವನನ್ನು ಹಿಡಿದು ಪೊಲೀಸರ ಕೈಗೆ ಒಪ್ಪಿಸುವುದಂತೂ ಖಂಡಿತ. ಕರಣಾಮಯಿ ನ್ಯಾಯಾಧೀಶ ಅವನನ್ನು ಖಂಡಿತವಾಗಿಯೂ ಮಾವನ ಮನೆಗೆ ಕಳುಹಿಸುವುದರಲ್ಲಿ ಎಳ್ಳಷ್ಟೂ ಸಂಶಯವಿರಲಿಲ್ಲ!

ಮೇಲ್ನೋಟಕ್ಕೆ ಸೋಫಿ ಲಕ್ಷಣವಾಗಿ ಕಾಣಿಸುತ್ತಿದ್ದ. ಇತ್ತೀಚೆಗಷ್ಟೇ ಗಡ್ಡ ಹೆರೆದಿದ್ದರಿಂದ ಅವನ ಕೆನ್ನೆಗಳು ಮಿರಮಿರನೆ ಮಿಂಚುತ್ತಿದ್ದವು. ಅವನ ಮೇಲೆ ಕರುಣೆತೋರಿ ಯಾರೋ ಒಬ್ಬ ಪಾದ್ರಿ ಕೊಟ್ಟಿದ್ದ ಕೋಟು ಹೊಸದಾಗಿ ಕಾಣಿಸುತ್ತಿದ್ದರೂ ಒಳಗಿನ ಶರಟು ಹಳೆಯದಾಗಿತ್ತು. ಕಂಬದ ಮರೆಯ ಮೇಜನ್ನು ಆಯ್ಕೆ ಮಾಡಿ ಕುಳಿತುಕೊಂಡರೆ ಯಾರಿಗೂ ಗೊತ್ತಾಗದೆಂದು ಅವನ ಅನಿಸಿಕೆ. ಅವನು ಧೈರ್ಯದಿಂದ ದುಬಾರಿಯಾಗಿ ಕಾಣಿಸುತ್ತಿದ್ದ ಹೋಟೆಲಿನೊಳಗೆ ನುಗ್ಗಿದ.